ಶ್ರೀ ಪಿ. ರಾಮ್‌ದೇವ್.—ಮೊದಲು ಅದಕ್ಕಿಂತ ಹೆಚ್ಚಿಗೆ ನಡೆದಿವೆ. ತಮ್ಮ ಕಾಲದಲ್ಲಿ ಏನೇನು ನಡೆದಿದೆ ಎಂಬುದನ್ನು ಬೇಕಾದರೆ ಹೇಳುತ್ತೇನೆ. ಈ ರೀತಿ ಶಾಸಕರ ಭವನ ಎಲ್ಲ ಸಮಾಜಘಾತುಕ ಶಕ್ತಿಗಳಿಗೆ ಅವಕಾಶವಾಗತಕ್ಕದ್ದನ್ನು ತಪ್ಪಿಸಲಿಕ್ಕೆ ಏನು ಕ್ರಮ ಕೈಗೊಳ್ಳುತ್ತೀರಿ ? ಶಾಸಕರ ಗೌರವ ಉಳಿಸುವುದಕ್ಕೆ ತಾವು ಏನು ಕ್ರಮ ತೆಗೆದುಕೊಂಡಿದ್ದೀರಿ ? ಇಂಡಿಯನ್ ಫಿನಲ್ ಕೋಡಿನಲ್ಲಿರತಕ್ಕ ಎಲ್ಲ ನಿಯಮಗಳನ್ನು ಮೀರುವಂತಹ ಭ್ರಷ್ಟಾಚಾರಗಳು ಅಲ್ಲಿ ನಡೆಯುತ್ತಿವೆ. ಅವನ್ನು ಹತೋಟಿಯಲ್ಲಿಡುವುದಕ್ಕೆ ತಾವು ಪ್ರಯತ್ನ ಮಾಡಬೇಕು. ಅಲ್ಲಿ ಡಿಸಿಪ್ಲಿನ್ ಎಂಬುದು ಇಲ್ಲ. ಶಾಸಕರ ಕೋಣೆಗಳನ್ನು ಬೇರೆಯವರಿಗೆ ಏನು ಕೊಡುತ್ತಿದ್ದಾರೆ ಅದನ್ನು ತಪ್ಪಿಸುವುದಕ್ಕೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ? ಈ ರೀತಿ ಬೇರೆಯವರಿಗೆ ಕೊಟ್ಟು ದುರುಪಯೋಗವಾಗುತ್ತಿದೆ. ಅಲ್ಲಿ ಆಂಟಿ ಸೋಷಿಯಲ್ ಎಲಿಮೆಂಟ್ಸ್ ಇವೆ. ಸಮಾಜಘಾತುಕ ಶಕ್ತಿಗಳಿಂದ ಆಗತಕ್ಕ ಈ ದುರುಪಯೋಗವನ್ನು ಮತ್ತು ಭ್ರಷ್ಟಾಚಾರವನ್ನು ತಡೆಗಟ್ಟತಕ್ಕ ಕ್ರಮವನ್ನು ಕೂಡಲೇ ಕೈಗೊಳ್ಳಬೇಕು. ಇದರ ಬಗ್ಗೆ ತಾವು ಏನು ಮಾಡುತ್ತೀರೆಂದು ಕೇಳುತ್ತೇನೆ.

ಅಧ್ಯಕ್ಷರು.—ಸದಸ್ಯರು ನನ್ನನ್ನೇ ಪ್ರಶ್ನೆ ಕೇಳಿದ್ದಾರೆ. ಶಾಸಕರ ಭವನದಲ್ಲಿ 505ನೇ ಕೊಠಡಿಯಲ್ಲಿನಡೆದಿರತಕ್ಕ ಘಟನೆ ಬಗ್ಗೆ ಪೂರ್ಣ ಮಾಹಿತಿ ಬಂದಿದೆ, ಇದನ್ನು ಚರ್ಚೆಯ ವಸ್ತುವಾಗಿ ಮಾಡುವುದು ಸರಿಯಲ್ಲ. ಇದರ ಬಗ್ಗೆ ನಾವು ನೀವು ಕೂತು ಪ್ರತ್ಯೇಕವಾಗಿ ಚರ್ಚೆ ಮಾಡೋಣ. ಇಂಡಿಯನ್ ಫೀನಲ್ ಕೋಡಿನ ಎಲ್ಲ ನಿಯಮಗಳನ್ನು ಮೀರುವಂತಹ ಹಂತಕ್ಕೆ ಇನ್ನೂ ಹೋಗಿಲ್ಲ. ಆ ರೀತಿ ಹೋಗುವುದಕ್ಕೆ ಅವಕಾಶ ಕೊಡುವುದಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ.—ಶಾಸಕರ ಭವನದ ವಿಚಾರದಲ್ಲಿ ರಾಮ್‌ದೇವ್ ಅವರು ಪ್ರಶ್ನೆ ಎತ್ತಿದ್ದಾರೆ. ಈ ಬಗ್ಗೆ ನಾನು ತಮ್ಮ ಕೊಠಡಿಗೆ ಬಂದು ವಿಷಯವನ್ನು ಚರ್ಚೆ ಮಾಡಬೇಕೆಂದು ಇದ್ದೆ. ಅಲ್ಲಿ ಏನೇನೋ ನಡೆಯುತ್ತದೆಂದು ಕೇಳಿದ್ದೇನೆ. ಅಲ್ಲಿ ವ್ಯವಸ್ಥೆ ಸರಿಯಾಗಿಲ್ಲ; ಕೆಲವು ಕಡೆ ಆಶಿಸ್ತು ಇದೆ. ಇದು ಶಾಸಕರಿಗೆ ಗೌರವ ತರುವುದಿಲ್ಲ. ಇಲ್ಲಿ ಇಂತಹ ವಿಚಾರಗಳು ಸಾಕಷ್ಟು ನಡೆಯುತ್ತಿವೆ. ಆದ್ದರಿಂದ ದಯಮಾಡಿ ವಿರೋಧ ಪಕ್ಷದ ನಾಯಕರನ್ನು ಮತ್ತು ಎಲ್ಲ ಪಕ್ಷದ ಶಾಸಕರನ್ನು ಕರೆದು ತಾವು ಇದರ ಬಗ್ಗೆ ಕೂಲಂಕಷವಾಗಿ ಚರ್ಚೆ ಮಾಡಿ ಶಾಸಕರ ಬಗ್ಗೆ ಜನರಿಂದ ಇಲ್ಲದ ಸಲ್ಲದ ಮಾತುಗಳು ಬರುವುದಕ್ಕೆ ಅವಕಾಶ ಕೊಡಬಾರದೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ನಿಮ್ಮ ಸಲಹೆ ಸ್ವಾಗತಾರ್ಹವಾದುದು. ಆದಷ್ಟು ಬೇಗನೆ ಎಲ್ಲ ಪಕ್ಷದ ಶಾಸಕರ ಸಭೆ ಕರೆದು ತೀರ್ಮಾನಿಸುವುದಕ್ಕೆ ಪ್ರಯತ್ನ ಮಾಡೋಣ.

ಶ್ರೀ ಎಂ. ಎಸ್. ಕೃಷ್ಣನ್.—ನಾನು ಎರಡು ನೋಟೀಸ್‌ಗಳನ್ನು ಕಳುಹಿಸಿದ್ದೆ. ಅದರಲ್ಲಿ ಒಂದನ್ನು ರೂಲ್ 334ರ ಕೆಳಗೆ ಕಳುಹಿಸಿದ್ದೇನೆ. ನಿನ್ನೆ ದಿವಸ ಹುಬ್ಬಳ್ಳಿಯಲ್ಲಿ ಸಾರಿಗೆ ಸಂಸ್ಥೆಯ ಕಂಡಕ್ಟರ್ ಒಬ್ಬರ ಹಠಾತ್ತನೆ ನಿಧನರಾದ ಸುದ್ದಿ ಪತ್ರಿಕೆಗಳಲ್ಲಿ ಕೂಡ ಬಂದಿದೆ. ಅವರು ಅಸ್ವಸ್ಥರಾಗಿದ್ದ ಸಂದರ್ಭದಲ್ಲಿ ಸಂಸ್ಥೆಯವರು ರಜ ಕೊಡಲು ನಿರಾಕರಿಸಿದ ಕಾರಣ ಅವರು ಪ್ರಾಣ ಕಳೆದುಕೊಂಡರು. ಕೊನೆಗೆ ಮಿಂಚಿನ ಮುಷ್ಕರವಾಗಿ ಬಹಳ ಗಲಾಟೆಯಾಗಿದೆ ಎಂದು ಪ್ರಜಾವಾಣಿ ಪತ್ರಿಕೆಯಲ್ಲಿ ಬಂದಿದೆ. ಈ ಪ್ರಶ್ನೆ ಇನ್ನೂ ಇತ್ಯರ್ಥವಾಗಿಲ್ಲ. ಅಲ್ಲಿಂದ ಟೆಲಿಗ್ರಾಂಗಳು ಕೂಡ ಬರುತ್ತಿವೆ. ಇವತ್ತು ಬೇರೆ ಗಲಭೆ ಆಗಿದೆ. ನಾನು ಆ ಎಲ್ಲ ವಿವರಗಳಿಗೆ ಹೋಗುವುದಿಲ್ಲ. ಯಾವ ನೌಕರನೇ ಆಗಲೀ ಅವನ ಆರೋಗ್ಯ ಕೆಟ್ಟಾಗ ಮಾನವೀಯತೆಯನ್ನು ತೋರಿಸತಕ್ಕ ಸೌಜನ್ಯ ಅಧಿಕಾರಿಗಳಿಗೆ ಇರಬೇಕು. ಆದ್ದರಿಂದ ಇದರ ಬಗ್ಗೆ ಸಂಬಂಧಪಟ್ಟ ಮಂತ್ರಿಗಳು ಹೇಳಿಕೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಪಿ. ಪ್ರಕಾಶ್.—ನಾನು ಘಟನೆ ನಡೆದ ದಿನ ಸಂಜೆ ಹುಬ್ಬಳ್ಳಿಯಲ್ಲಿದ್ದೆ. ಅಲ್ಲಿ ನನಗೆ ಬಂದ ವರದಿ ಪ್ರಕಾರ, ಆ ಕಂಡಕ್ಟರ್ ಬಹಳ ಪಾನಮತ್ತನಾಗಿದ್ದ ಮತ್ತು ಆತ ಅದರಲ್ಲೇ ಅಸು ನೀಗಿದ ಎಂದು ವದಂತಿ ಬಂದಿರುವುದರಿಂದ ರಜಾ ಕೇಳಿದ ವಿಚಾರದ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳನ್ನು ಆಮಾನತ್ತಿನಲ್ಲಿ ಇಡಬೇಕೆಂದು ಕಾರ್ಮಿಕ ಮುಖಂಡರು ಪ್ರಾದೇಶಿಕ ಹಿರಿಯ ಅಧಿಕಾರಿಗಳನ್ನು ಕೇಳಿದ್ದಕ್ಕೆ ಅದರ ಬಗ್ಗೆ ವಿಚಾರಣೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇನೆಂದು ಅವರು ಹೇಳಿದ್ದಾರೆ; ನಂತರ ಆ ಬಗ್ಗೆ ಮಾತನಾಡಿಸರಿಪಡಿಸಿದ್ದಾರೆ. ಮಾರನೇ ದಿವಸ ಮುಂದಿನ ಬಾಗಿಲಿನಲ್ಲಿ ಹುಡುಗರು ಹೋಗಬಾರದು ಅಂದಾಗ ಕಂಡಕ್ಟರ್ ಮತ್ತು ಕಾಲೇಜು ವಿದ್ಯಾರ್ಥಿಗಳ ನಡುವೆ ಜಗಳವಾಗಿದೆ. ಅದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎಂ. ಎಸ್. ಕೃಷ್ಣನ್.—ಅವರು ಕೊಟ್ಟಿರತಕ್ಕ ಹೇಳಿಕೆ ಅಸಮರ್ಪಕವಾಗುತ್ತದೆ. ಮುಂದೆ ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತಾರೆಂಬುದನ್ನು ಹೇಳಬೇಕು.

ಅಧ್ಯಕ್ಷರು.—ತಾವು ಹಿರಿಯ ಸದಸ್ಯರಾಗಿ ಹೀಗೆ ಮಾಡಿದರೆ ಹೇಗೆ ? ರೂಲ್ 334ರ ಪ್ರಕಾರ ಗಮನ ಸೆಳೆದಿದ್ದೀರಿ; ಮತ್ತು ಅದಕ್ಕೆ ಮಂತ್ರಿಗಳು ಉತ್ತರ ಹೇಳಿದ್ದಾರೆ. ಮತ್ತೆ ಪ್ರಶ್ನೆ ಕೇಳುವುದಕ್ಕೆ ಅವಕಾಶ ಇಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ನಾನು ವಿಧಿನಿಯಮಕ್ಕೆ ವಿರೋಧವಾಗಿ ಹೋಗಿಲ್ಲ. ನಾನು ಕೇಳಿದ್ದಕ್ಕೆ ಪೂರ್ತಿ ಪರಿಹಾರ ಸಿಕ್ಕಲಿಲ್ಲ.

ಅಧ್ಯಕ್ಷರು.—ನೀವು ಅವರ ಛೇಂಬರಿಗೆ ಹೋಗಿ ವೈಯಕ್ತಿಕವಾಗಿ ಮಾತನಾಡಿ.

ಶ್ರೀ ಎಂ. ಎಸ್. ಕೃಷ್ಣನ್.—ಅರ್ಧಂಬರ್ಧ ಉತ್ತರ ದೊರೆಯುವುದು ಸರಿಯಲ್ಲ.

ಶ್ರೀ ಎಂ. ಪಿ. ಪ್ರಕಾಶ್.—ಈ ವಿಚಾರದಲ್ಲಿ ಕಾರ್ಮಿಕ ಮುಖಂಡರ ಜೊತೆ ಮಾತನಾಡಿದ್ದಾರೆ. ರೀಜಿನಲ್ ಮ್ಯಾನೇಜರ್ ರಾಜಾರೆಡ್ಡಿ ಅವರು ಮುಖಂಡರ ಜೊತೆ ಚರ್ಚೆ ಮಾಡಿದ್ದಾರೆ. ಕಾರ್ಮಿಕ ಮುಖಂಡರು ಏನು ಹೇಳತ್ತಾರೆಂದರೆ ಅವರು ರಜ ಕೇಳಿದರೂ ಕೊಡಲಿಲ್ಲ; ಆ ಕಾರಣದಿಂದ ಆತ ಅಸು ನೀಗಿದ; ಆದಕಾರಣ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕು ಎಂದು ಹೇಳುತ್ತಾರೆ. ನಮಗೆ ಬಂದಿರುವ ವರದಿ ಪ್ರಕಾರ ಆತ ವಿವರೀತ ಕುಡಿದಿದ್ದರಿಂದ ಅಸುನೀಗಿದ್ದಾನೆ. ಈ ಬಗ್ಗೆ ವಿಚಾರ ಮಾಡಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆಂದು ಕಾರ್ಮಿಕ ಮುಖಂಡರ ಜೊತೆ ಮಾತನಾಡಿ ಒಪ್ಪಂದ ಮಾಡಿಕೊಂಡು ಅಸ್ತವ್ಯಸ್ತವಾಗಿದ್ದ ಪರಿಸ್ಥಿತಿಯನ್ನು ಸರಿಪಡಿಸಿದ್ದೇವೆ.

ಶ್ರೀ ಎಂ. ಎಸ್. ಕೃಷ್ಣನ್.—ಪೋಸ್ಟ್‌ಮಾರ್ಟಮ್ ಏನು ಮಾಡಿದ್ದೀರಿ ?

ಶ್ರೀ ಎಂ. ಪಿ. ಪ್ರಕಾಶ್.—ಪೋಸ್ಟ್ ಮಾರ್ಟಮ್ ವರದಿ ಇನ್ನೂ ಬಂದಿಲ್ಲ. ಬಂದನಂತರ ಸಭೆಯ ಮುಂದಿಡುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ರಾಯಚೂರು ಥರ್ಮಲ್ ಪವರ್ ಪ್ಲಾಂಟ್‌ನಲ್ಲಿ ಕೆಲಸ ನಿಂತು ಹೋಗಿದೆ. ಸಂಬಂಧಪಟ್ಟ ಮಂತ್ರಿಗಳಿಂದ ಸ್ಪಷ್ಟೀಕರಣ ಕೇಳೋಣವೆಂದರೆ ಅವರು ಕಾಣುತ್ತಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ರಾಯಚೂರಿನಲ್ಲಿ ಫೈರಿಂಗ್ ಆದ ಬಗ್ಗೆ ಮುಖ್ಯಮಂತ್ರಿಗಳ ಹೇಳಿದರು, ಮಾನ್ಯ ಜಿಗಜ್ಜಿಣಗಿಯವರು.....

ಅಧ್ಯಕ್ಷರು.—ಮಂತ್ರಿಗಳು ಸ್ಟೇಟ್‌ಮೆಂಟ್ ಮಾಡಿದ್ದಾರಲ್ಲ.

ಶ್ರೀ ಬಿ. ಶಿವಣ್ಣ.—ಯಾವಾಗ ಮಾಡುವುದು ?

ಶ್ರೀ ರಾಮಕೃಷ್ಣ ಹೆಗಡೆ.—ಅಷ್ಟು ಜೋರು ಮಾಡುವುದು ಬೇಡ ಸ್ಟೇಟ್‌ಮೆಂಟ್ ಮಾಡುವುದಕ್ಕೆ ತಮ್ಮ ಅಪ್ಪಣೆ ಕೇಳಿದ್ದೇವೆ. ತಮ್ಮ ಅಪ್ಪಣೆ ಸಿಕ್ಕ ತಕ್ಷಣ ಮಾನ್ಯ ಮಂತ್ರಿಗಳು ಸ್ಟೇಟ್‌ಮೆಂಟ್ ಮಾಡುತ್ತಾರೆ. ಅದಕ್ಕೇಕೆ ಜೋರಾಗಿ ಕೇಳಬೇಕು ?

ಶ್ರೀ ಎಂ. ಎಸ್. ಕೃಷ್ಣನ್.—ರಾಯಚೂರಿನಲ್ಲಿ ನಡೆದ ಫೈರಿಂಗ್ ಬಗ್ಗೆ ಪ್ರಸ್ತಾಪ ಆಯಿತು. ಮುಖ್ಯಮಂತ್ರಿಗಳು ಆ ಬಗ್ಗೆ ಏನೋ ಹೇಳಿದ್ದಾರೆ. ನಾನು ಕೇಳಿದ ಪ್ರಶ್ನೆ ಥರ್ಮಲ್ ಪವರ್ ಪ್ಲಾಂಟ್ ಬಗ್ಗೆ. ಅಲ್ಲಿ ಟ್ರೇಡ್ ಯೂನಿಯನ್ ಲೀಡರ್ಸ್ ಎಲ್ಲರನ್ನೂ ಸಸ್ಪೆಂಡ್ ಮಾಡಿದ್ದಾರೆ. ಕೈ ಸಿಸ್ ಬಂದು ತಿಕ್ಕಾಟ ಬಂದು ಪವರ್ ಪ್ಲಾಂಟ್ ನಿಂತಿದೆ. ಇಂಥ ಸಂದಿಗ್ಧ ಪರಿಸ್ಥಿತಿಯಲ್ಲಿ ಪವರ್ ಪ್ಲಾಂಟ್ ನಿಂತರೆ ಏನಾಗುತ್ತದೆ ಎಂಬುದು ತಮಗೆ ಗೊತ್ತು. ಯಾವ ಕಾರಣವೂ ಇಲ್ಲದೆ ಅವರನ್ನು ಸಸ್ಪೆಂಡ್ ಮಾಡಲಾಗಿದೆ ಎಂದು ಡೆಕ್ಕನ್ ಹೆರಾಲ್ಡ್ ಪತ್ರಿಕೆಯಲ್ಲಿ ವರದಿಯಾಗಿದೆ. ಈ ಬಗ್ಗೆ ಸಂಬಂಧಪಟ್ಟ ಮಂತ್ರಿಗಳು ಸರಿಯಾಗಿ ಉತ್ತರ ಹೇಳಬೇಕು. ಈ ಪ್ರಶ್ನೆ ಇತ್ಯರ್ಥ ಮಾಡುವುದಕ್ಕೆ ಏನು ಕ್ರಮ ತೆಗೆದುಕೊಂಡಿದ್ದಾರೆ, ಏನು ಪ್ರಯತ್ನ ನಡೆದಿದೆ, ಸಸ್ಪೆಂಡ್ ಆದವರನ್ನು ವಾಪಸ್ ತೆಗೆದುಕೊಳ್ಳುತ್ತಾರಾ ಎಂಬುದನ್ನು ಹೇಳಬೇಕು. ಈ ಪ್ರಶ್ನೆ ಇತ್ಯರ್ಥ ಮಾಡಬೇಕು, ಸಸ್ಪೆಂಡ್ ಆದವರನ್ನು ವಾಪಸ್ ತೆಗೆದುಕೊಳ್ಳಬೇಕು ಎಂದು ನಾನು ಹೇಳುತ್ತೇನೆ. ಈ ಬಗ್ಗೆ ಯಾರು ಉತ್ತರ ಕೊಡುತ್ತಾರೋ ಗೊತ್ತಿಲ್ಲ.

ಶ್ರೀ ಬಿ. ಶಿವಣ್ಣ.—ನಾನು ಒಂದು ಕಾಲಿಂಗ್ ಅಟೆನ್‌ಷನ್ ಕಳುಹಿಸಿದ್ದೇನೆ.

ಅಧ್ಯಕ್ಷರು.—ಎಲ್ಲಾ ಬ್ಯಾಲೆಟ್ ಆಗಿ ಬರಬೇಕು.

ಶ್ರೀ ಎಂ. ಎಸ್. ಕೃಷ್ಣನ್.—ನಾನು ಕೇಳಿದ ಪ್ರಶ್ನೆ ಏನಾಯಿತೋ ಗೊತ್ತಿಲ್ಲ.

ಅಧ್ಯಕ್ಷರು.—ಆರೋಗ್ಯ ಮಂತ್ರಿಗಳು ಏನು ಹೇಳುತ್ತಾರೋ ನೋಡೋಣ.

ಶ್ರೀ ಪಿ. ಜಿ. ಆರ್. ಸಿಂಧ್ಯ (ಮಾನ್ಯ ಆರೋಗ್ಯ ಖಾತೆ ರಾಜ್ಯ ಮಂತ್ರಿಗಳು) —ಮಾನ್ಯ ಅಧ್ಯಕ್ಷರೆ, ನರಗುಂದ ತಾಲ್ಲೂಕಿನಲ್ಲಿ ಕಾಲರಾ ಹರಡಿದ್ದು ಸರ್ಕಾರದ ಗಮನಕ್ಕೆ ಬಂದಿದೆ. ಬೆಳಗ್ಗೆ ವಿಷಯ ಗೊತ್ತಾದ ಕೂಡಲೇ ಧಾರವಾಡ ಜಿಲ್ಲಾ ವೈದ್ಯಾಧಿಕಾರಿಗಳ ಜೊತೆ ಮಾತನಾಡಿ ನರಗುಂದಕ್ಕೆ ಹೋಗಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಈಗಾಗಲೇ ಆದೇಶ ನೀಡಿದ್ದೇನೆ. ಔಷಧಿಗಳು ಮತ್ತಿತರ ಸೌಲಭ್ಯಗಳು ಸಾಕಾಗದೆ ಹೋದರೆ ಅದನ್ನು ಕಳುಹಿಸಿಕೊಡತಕ್ಕ ವ್ಯವಸ್ಥೆಯನ್ನು ಮಾಡಬೇಕೆಂದಿದ್ದೇವೆ. ಸಂಜೆಯೊಳಗಡೆ ಈ ವಿಷಯ ತಿಳಿಸಬೇಕೆಂದೂ ಜಿಲ್ಲೆಯ ವೈದ್ಯಾಧಿಕಾರಿಗಳಿಗೆ ತಿಳಿಸಿದ್ದೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ನಾನು ರೂಲ್ 334ರ ಪ್ರಕಾರ ಎರಡು ವಿಚಾರಗಳನ್ನು ಕಳುಹಿಸಿದ್ದೇನೆ. ಮೊದಲನೆಯದಾಗಿ ಸರ್ಕಾರ ಇಂಗ್ಲೀಷ್ ಮಾಧ್ಯಮ ಶಾಲೆಗಳನ್ನು ತೆರೆಯುವುದಕ್ಕೆ ಅವಕಾಶ ಕೊಡುವುದಿಲ್ಲ ಎಂದು ಸ್ಪಷ್ಟವಾಗಿ ಹೇಳಿ ಒಂದು ನೀತಿಯನ್ನು ಪ್ರಕಟಿಸಿದ್ದಾರೆ. ಆದರೆ ಇಂಗ್ಲಿಷ್ ಮಾಧ್ಯಮವು ಶಾಲೆಗಳನ್ನು ತೆರೆದಿದ್ದಾರೆ. ಲೋಂಡಾ ಮತ್ತು ಬೆಳಗಾಂ ಜಿಲ್ಲೆಯ ಯಮುನಾಪುರದಲ್ಲಿ ತೆರೆದಿದ್ದಾರೆ. ಸರ್ಕಾರದ ಡಿಕ್ಲೇರ್ಡ್ ಪಾಲಿಸಿಗೆ ವ್ಯತಿರಿಕ್ತವಾಗಿ ನಿರ್ಣಯ ತೆಗೆದುಕೊಂಡ ಬಗ್ಗೆ ವಿದ್ಯಾ ಸಚಿವರಿಗೆ ಸೂಚನೆ ಕಳುಹಿಸಿದ್ದೇನೆ. ಆದ್ದರಿಂದ ಈ ವಿಚಾರದ ಬಗ್ಗೆ ತಿಳಿಸಬೇಕು. ಎರಡನೆಯದಾಗಿ ಪಾವಗಡದ ಬಗ್ಗೆ ಒಂದು ಸೂಚನೆ ಕಳುಹಿಸಿದ್ದೇವೆ. ನಾನು ಅಲ್ಲಿಗೆ ಹೋಗಿ ಬಂದಿದ್ದೇನೆ. ನಮ್ಮ ಜೊತೆಯಲ್ಲಿ ಆ ಮನೆಯ ವಿರೋಧಪಕ್ಷದ ನಾಯಕರು ಮತ್ತು ಕೆಲವು ಸದಸ್ಯರೂ

ಬಂದಿದ್ದರು. ನಾನು ಹೋಗಿ ನೋಡಿದ ವಿದ್ಯಮಾನದ ರೀತಿಯಲ್ಲಿ, ಪತ್ರಿಕೆಯಲ್ಲಿ ಬಂದಿರತಕ್ಕ ವಿಚಾರದಲ್ಲಿ ಮತ್ತು ನಿನ್ನೆ ಸದನದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳು ಕೊಟ್ಟಿರುವ ವಿಚಾರದಲ್ಲಿ ಪ್ರಸ್ತಾಪ ಮಾಡಬೇಕು. ಪೋಲೀಸರು ಯಾವ ತನಿಖೆಯನ್ನು ನಡೆಸುತ್ತಿದ್ದಾರೆ ಅದರಲ್ಲಿ ಸಾಕಷ್ಟು ವಿಚಾರಗಳು ಬಂದಿವೆ. ಆದ್ದರಿಂದ ಈ ಬಗ್ಗೆ ಎಲ್ಲಾ ಪ್ರಸ್ತಾಪ ಮಾಡಬೇಕು. ಈ ದಿನ ಕಾರ್ಯಕಲಾಪ ಮುಗಿಯುವುದರೊಳಗೆ ಯಾವುದಾದರೂ ವೇಳೆಯಲ್ಲಿ ಪ್ರಸ್ತಾಪಿಸಲು ಅವಕಾಶ ಮಾಡಿಕೊಡಬೇಕು. ಇದರಲ್ಲಿ ಪೋಲೀಸರ ನಿಷ್ಕ್ರಿಯತೆ ಕಂಡುಬಂದಿದೆ. ಸ್ಥಳೀಯ ಪೋಲೀಸಾ ಅಧಿಕಾರಿಗಳು 5 ಕೇಸ್ ರಿಜಿಸ್ಟರ್ ಮಾಡಲಿಲ್ಲ ಎಂದು ತಿಳಿದುಬಂದಿವೆ. ಆದ್ದರಿಂದ ಆ ವಿಚಾರವನ್ನು ಪುನಃ ಪ್ರಸ್ತಾಪ ಮಾಡಬೇಕು. ಪೋಲೀಸರ ನಡವಳಿಕೆ ಮತ್ತು ಮಾಡಿದಂಥ ತನಿಖಾ ವಿಧಾನದ ಬಗ್ಗೆ ನಾವು ಚರ್ಚೆ ಮಾಡಬೇಕು. ಈಗಲೂ ಈ ವಿಷಯ ನಿಗೂಢವಾಗಿ ಉಳಿದಿದೆ. ಹೆಚ್ಚು ನಿಗೂಢವಾದದ್ದು ಪೋಲೀಸರು ಮತ್ತು ಅರಣ್ಯ ಇಲಾಖೆಯವರ ನಡವಳಿಕೆಯಿಂದ. ಮಾನ್ಯ ಮುಖ್ಯಮಂತ್ರಿಗಳ ಹೇಳಿಕೆಯಿಂದ ಮತ್ತಷ್ಟು ನಿಗೂಢವಾಗಿದೆ; ಸೂಕ್ಷ್ಮವಾಗಿದೆ. ವಿಚಾರಣೆಯಲ್ಲಿ ಸಂಪೂರ್ಣ ನಿಷ್ಕ್ರಿಯತೆ ಕಂಡುಬಂದಿದೆ. Direction for investigation is important. ಮುಖ್ಯಮಂತ್ರಿಗಳು ಡೈರೆಕ್ಷನ್ ಕೊಟ್ಟಿರುವುದರಿಂದ ಪರಿಸ್ಥಿತಿ ಸಂಪೂರ್ಣವಾಗಿ ಗೊಂದಲಮಯವಾಗಿದೆ. ಸ್ಪಷ್ಟವಾದ ಚಿತ್ರ ಹೊರಬರುವುದು ಅಸಾಧ್ಯವಾಗಿದೆ. ಆ ದೃಷ್ಟಿಯಿಂದ ಈ ಸದನದಲ್ಲಿ ಚರ್ಚೆಯಾಗಬೇಕು.

ಶ್ರೀ ಬಿ. ಎಸ್. ಯಡಿಯೂರಪ್ಪ.—ನಾನು ಮತ್ತು ವಿ. ಎಸ್. ಆಚಾರ್ಯ ಅವರು ಮೊನ್ನೆ ದಿವಸ ಅಲ್ಲಿಗೆ ಹೋಗಿದ್ದೆವು. ಮಾನ್ಯ ಮೊಯಿಲಿಯವರು ಹೇಳುವುದು ಸತ್ಯವಾದ ಸಂಗತಿಯಾಗಿದೆ. ಆದ್ದರಿಂದ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು.—ನೋಟೀಸ್ ಇಲ್ಲ ಸದಸ್ಯರ ಹಕ್ಕು ಬಾಧ್ಯತಾ ಚ್ಯುತಿ ಬಗ್ಗೆ.

ಪಾವಗಡ ವಿಷಯದ ಮೇಲೆ ಸಚಿವರುಗಳ ಹೇಳಿಕೆಯ ಬಗ್ಗೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಭಾಧ್ಯಕ್ಷರೆ, ಮಾನ್ಯ ವಿರೋಧಪಕ್ಷದ ನಾಯಕರು ಹೇಳಿರತಕ್ಕ ವಿಚಾರದಲ್ಲಿ ಚರ್ಚೆಯಾಗುವುದು ಸೂಕ್ತ. ಅದಕ್ಕೆ ನಾನೂ ಬೆಂಬಲ ಕೊಡುತ್ತೇನೆ. ನಾನು ಪ್ರತ್ಯೇಕವಾದ ಒಂದು ಹಕ್ಕುಚ್ಯುತಿ ನಿರ್ಣಯವನ್ನು ಮಾನ್ಯ ಮುಖ್ಯಮಂತ್ರಿಗಳ ವಿರುದ್ಧ ಕಳುಹಿಸಿ ಕೊಟ್ಟಿದ್ದೇನೆ. ವಿಧಾನಪರಿಷತ್ತಿನಲ್ಲಿ ಪಾವಗಡದ ವಿಚಾರವಾಗಿ ಮೂರು ಜನ ಸಚಿವರು ಬೇರೆ ಬೇರೆ ಹೇಳಿಕೆಯನ್ನು ಕೊಟ್ಟಿದ್ದಾರೆ.

ಅಧ್ಯಕ್ಷರು.—ಅದು ಹಕ್ಕು ಚ್ಯುತಿ ಹೇಗಾಗುತ್ತದೆ ?

ಶ್ರೀ ಎಸ್. ಬಂಗಾರಪ್ಪ.—ಅದನ್ನು ನಾನು ಹೇಳಿದರೆ ಮಾತ್ರ ತಮಗೆ ಗೊತ್ತಾಗುತ್ತದೆ.

ಅಧ್ಯಕ್ಷರು.—ಇದೇ ಸದನದಲ್ಲಿ ಮತ್ತು ಸಂಸತ್ತಿನಲ್ಲಿ ನಡೆದಿರತಕ್ಕ ಪ್ರಾಕ್ಟೀಸ್ ಮತ್ತು ಪ್ರೊಸೀಜರ್ ಪ್ರಕಾರ ಹೇಳಿಕೆಗಳು incorrect statements, conflicting statements ಹಕ್ಕು ಚ್ಯುತಿಯಾಗುವುದಿಲ್ಲ ಎಂಬುದು ತಿರ್ಮಾನವಾದ ವಿಚಾರ.

ಶ್ರೀ ಎಸ್. ಬಂಗಾರಪ್ಪ.—ನಾನು ಸದನದ ಮುಂದೆ ವಿಚಾರ ಏನು ಎಂದು ಹೇಳುವುದಕ್ಕಿಂತ ಮೊದಲೇ ಈ ರೀತಿ ತೀರ್ಮಾನಕ್ಕೆ ಬರುವುದು ಸರಿಯಾದುದಲ್ಲ.

ಅಧ್ಯಕ್ಷರು.—ಬೇರೆ ರೂಪದಲ್ಲಿ ಚರ್ಚೆ ಮಾಡಬೇಕಾಗುತ್ತದೆ.

ಎಸ್. ಬಂಗಾರಪ್ಪ.—ನಾನು ಯಾವ ವಿಚಾರವನ್ನು ಸಭೆಯ ಮುಂದಿಡುತ್ತೇನೆ ಎಂಬುದನ್ನು ಹೇಳಿದ ಮೇಲೆ ಏನು ಎಂಬುದ ಗೊತ್ತಾಗುತ್ತದೆ.

ಅಧ್ಯಕ್ಷರು.—ನೋಟೀಸಿನಲ್ಲಿ ಗೊತ್ತಾಗುವುದಿಲ್ಲವೆ ?

ಶ್ರೀ ಎಸ್. ಬಂಗಾರಪ್ಪ.—ನೋಟೀಸಿನಲ್ಲಿ ಎಲ್ಲಾ ಬರೆಯುವುದಕ್ಕಾಗುವುದಿಲ್ಲ. ತಾವು ವಿಚಾರವನ್ನು ಗಮನಿಸಬೇಕು. ಈ ಸದನದಲ್ಲಿ ಪಾವಗಡ ಪ್ರಕರಣದ ಬಗ್ಗೆ ಚರ್ಚೆ ನಡೆದಾಗ ಮಾನ್ಯ ಮುಖ್ಯಮಂತ್ರಿಗಳು ಹೇಳಿಕೆ ಕೊಟ್ಟರು. ಅಲ್ಲಿ ಒಟ್ಟು 8 ಶಿಶುಹತ್ಯೆ ನಡೆದಿದೆ.

ಶ್ರೀ ರಾಮಕೃಷ್ಣ ಹೆಗಡೆ.—7.

ಶ್ರೀ ಎಸ್. ಬಂಗಾರಪ್ಪ.—7 ನಡೆದಿದೆ. ನಾನು ಈ ಬಗ್ಗೆ ಹೇಳಬೇಕಾದುದನ್ನು ಹೇಳಿದ ಮೇಲೆ ತಾವು ತಮ್ಮ ರೂಲಿಂಗ್ ಕೊಡಿ.

ಅಧ್ಯಕ್ಷರು.—ತಮ್ಮ ನೋಟೀಸ್‌ನಲ್ಲಿ ಏನು ಹೇಳಿದ್ದೀರಿ ಎಂಬುದನ್ನು ತಮ್ಮ ಗಮನಕ್ಕೆ ತರುತ್ತೇನೆ. ಶಾಸನಸಭೆಯಲ್ಲಿ ಇತ್ತೀಚೆಗೆ ಮಾನ್ಯ ಮುಖ್ಯಮಂತ್ರಿಗಳು ಪಾವಗಡ ಪ್ರಕರಣದ ಬಗ್ಗೆ ಹೇಳಿಕೆ ಕೊಟ್ಟಾಗ ಮತ್ತು ನಿನ್ನೆ ವಿಧಾನಪರಿಷತ್ತಿನಲ್ಲಿ ಸರ್ಕಾರದ ಪರವಾಗಿ ಹೇಳಿಕೆ ನೀಡಿದಾಗ ಮೊದಲ 5 ಶಿಶುಗಳು ಸತ್ತ ವಿಷಯದಲ್ಲಿ ಸ್ಥಳೀಯ ಪೋಲೀಸರು ಕೇಸನ್ನು ದಾಖಲು ಮಾಡಿಕೊಂಡಿಲ್ಲ ಎಂಬ ವಿಷಯವನ್ನು ಈ ಸದನದಲ್ಲಿ ಮರೆಮಾಚಿ ಇಡೀ ಸದನವನ್ನು ತಪ್ಪುದಾರಿಗೆ ಎಳೆದು ಸದನದ ಹಕ್ಕನ್ನು ಮೊಟಕು ಮಾಡಿದ್ದಾರೆ ಎಂದು ಹೇಳಿದ್ದೀರಿ. ಅದಕ್ಕೆ ನಾನು ಏನು ಹೇಳುತ್ತೇನೆಂದರೆ

> "as already stated giving of a premature publicity to various matters connected with the business of the House is an act